(ಗೊಂದಲ)

ಶ್ರೀ ಪಾಟಾಳ್ ನಾಗರಾಜ್:– ಇದುವರೆಗೂ ಏತಕ್ಕೆ ಹೇಳಿಕೆಯನ್ನು ಕೊಡುತ್ತಿದ್ದೀರಿ ನೀವು ಸರ್ಕಾರದವರು ? ಈವತ್ತು ತಾವು ಈ ನಿಯಮದ ಪುಸ್ತಕವನ್ನು ಬಿಚ್ಚುತ್ತಿದ್ದೀರಿ ಏನು ಹೇಳಬೇಕೋ ಹೇಳಿ. ಈ ತರಹವಾದರೆ ನಮಗೆ ನಿಜವಾಗಿಯೂ ಗೌರವ ಬರುವುದಿಲ್ಲ. ನಾವು ಸದನದಲ್ಲಿ ಇರಬೇಕೋ ಬೇಡವೋ ಹೇಳಿ. ಬೇಡ ಎಂದು ಹೇಳಿದರೆ ಹೊರಗಡೆ ಹೋಗುತ್ತೇವೆ.

ಶ್ರೀ ಹೆಚ್. ಜಿ. ಆರ್. ಸಿದ್ಧಯ್ಯ:– ಮಾನ್ಯ ಕೃಷ್ಣ ಅವರೇ, ನಮಗೆ ಏನಾಗಿದೆ ಎಂದರೆ ನಾವು ಏನಾದರೂ ಹೇಳುವುದಕ್ಕೆ ಹೊರಟರೆ ಇವರು ಏನೋ ಬೇರೆ ಅರ್ಥಗಳನ್ನು ಇಟ್ಟುಕೊಂಡು ಮಾತನಾಡುತ್ತಾರೆ ಎನ್ನುವ ಅಭಿಪ್ರಾಯಕ್ಕೆ ತಾವು ಬರುತ್ತೀರಿ. ಈಗ ನಿಮ್ಮ ಸರ್ಕಾರ ಫಂಕ್ಷನ್ ಆಗುವುದಿಲ್ಲ ಎನ್ನುವುದಕ್ಕೆ ಇದಕ್ಕಿಂತ ಉದಾಹರಣೆ ಏನು ಹೇಳಬೇಕು ? ನಾವು ಕೂಡ ಐದಾರು ವರ್ಷಗಳ ಕಾಲ ಮಂತ್ರಿಗಿರಿ ಮಾಡಿದ್ದೇವೆ. ನಾವು ಸಣ್ಣ ಜಾತಿಯವರು ಇರಬಹುದು, ಬಹಳ ಸಣ್ಣವರು ಇರಬಹುದು. ಆದರೆ ನಾನು ಬಹಳ ನೋವಿನಿಂದ ಈ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾವು ಹೇಳತಕ್ಕ ವಿಚಾರಗಳು ತಮ್ಮ ಗಮನಕ್ಕೆ ಬರುವುದಿಲ್ಲ. ಸರ್ಕಾರದ ಗಮನಕ್ಕೆ ಬರುವುದಿಲ್ಲ. ನಾವು ಕೇಳತಕ್ಕ ಪ್ರಶ್ನೆಗಳಿಗೆ ಉತ್ತರ ಇಲ್ಲ, ಇಲ್ಲ. ಹೆಲ್ಪ್ ಓವರ್ ಎಂದು ಹೇಳುತ್ತೀರಿ. ಇನ್ನೊಂದು ದಿವಸ ಉತ್ತರ ಕೊಡುತ್ತೇನೆಂದು ಹೇಳುತ್ತೀರಿ. ಕಾಲಿಂಗ್ ಅಟೆನ್‌ಷನ್‌ಗೆ ಉತ್ತರ ಇಲ್ಲ. ನಾವು ಏತಕ್ಕೆ ಇಲ್ಲಿ ಕುಳಿತುಕೊಳ್ಳಬೇಕು ?

ಶ್ರೀ ಶ್ರೀರಂಗದೇವರಾಯಲು:– ಮಾನ್ಯ ಅಧ್ಯಕ್ಷರೇ, ನಾನು ನಾಳೆ ಉತ್ತರ ಕೊಡುತ್ತೇನೆ.

2. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಂಗಾಮಿ ಲಗಾಣಿ ಮೇಲೆ ಗುತ್ತಿಗೆಗೆ ಕೊಟ್ಟಿರುವ ಜಮೀನುಗಳನ್ನು ಖಾಯಂಗೊಳಿಸುವ ಬಗ್ಗೆ.

† ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಅರಣ್ಯ ಇಲಾಖೆಯ ಭೂಮಿಯನ್ನು 1970ಕ್ಕೂ ಮೊದಲು ಕಡು ಬಡವರಿಗೆ ಹಾಗೂ ಪರಿಶಿಷ್ಟ ಜಾತಿಯ ಜನಾಂಗದವರಿಗೆ ಕೃಷಿಗಾಗಿ ನೀಡಲು ಕಂದಾಯ ಇಲಾಖೆಗೆ ಬಿಡುಗಡೆ ಮಾಡಿದ್ದರೂ ಸಹ ಸಾಗುವಳಿ ಮಾಡುತ್ತಿರುವ ರೈತರಿಗೆ ಮಂಜೂರು ಮಾಡಬೇಕಾಗಿರುವುದರಿಂದ ಸರ್ಕಾರ, ಸಹಕಾರ ಸಂಘ ಮತ್ತು ಬ್ಯಾಂಕುಗಳಿಂದ ಯಾವುದೇ ಸವಲತ್ತು ದೊರೆಯದೆ ತೊಂದರೆಯಾಗುತ್ತಿರುವುದರ ಬಗ್ಗೆ ನಾನು ಮಾನ್ಯ ಕಂದಾಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):– 1964ರಿಂದ 1968ನೇ ಇಸವಿಯಲ್ಲಿ ಸಾಗುವಳಿಗೆಂದು ಕಂದಾಯ ಇಲಾಖೆಗೆ ಬಿಡುಗಡೆ ಮಾಡಿದ ಅರಣ್ಯ ಭೂಮಿಯ ಕ್ಷೇತ್ರ 65,689 ಏಕರೆಗಳ ಪೈಕಿ, 19,529 ಏಕರೆ ಪ್ರದೇಶವನ್ನು 6,156 ಜನರಿಗೆ ಸಾಗುವಳಿಗಾಗಿ 1970ನೇ ಇಸವಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಸದರಿ ಭೂಮಿಯನ್ನು ಮೂರು ವರ್ಷಗಳ ಒಳಗೆ ಸಾಗುವಳಿಗೆ ತರಬೇಕೆಂಬ ಷರತ್ತಿಗೆ ಒಳಪಡಿಸಿ ಮಂಜೂರು ಮಾಡಲಾಗಿತ್ತು. 1974ನೇ ಇಸವಿಯ ನಂತರ ಈ ಗುತ್ತಿಗೆಯನ್ನು ಮುಂದುವರೆಸಿರುವುದಿಲ್ಲ. ಗುತ್ತಿಗೆದಾರರ ಸ್ವಾಧೀನದಲ್ಲಿ ಸದರಿ ಜಮೀನುಗಳು ಇರುತ್ತವೆ. ಕೆಲವರು ಜಮೀನು ಅಭಿವೃದ್ಧಿ ಮಾಡಿದ್ದರೆ ಮತ್ತೆ ಕೆಲವರು ಕೆಲವು ಮಂಜೂರಿ ಷರತ್ತುಗಳನ್ನು ಉಲ್ಲಂಘಿಸಿದ್ದಾರೆ. ಆದಾಗ್ಯೂ, ಸದರಿ ಅರಣ್ಯ ಭೂಮಿಯು ಉದರ ಏಲ್ಲಾ ಗುಣಗಳನ್ನು ಕಳೆದುಕೊಂಡಿದೆ. ನಿಯಮಗಳನುಸಾರ ಆ ಭೂಮಿಗಳನ್ನು ಏಂಬೇ ಕೆಲಸಕ್ಕೆ ಅರ್ಹ ಗುತ್ತಿಗೆದಾರರಿಗೆ ಮಂಜೂರು ಮಾಡಲು ಕಂದಾಯ ಇಲಾಖೆಯು ಇಚ್ಛಿಸುತ್ತದೆ. ಈ ಜಮೀನುಗಳನ್ನು ಅರಣ್ಯ ಸಂರಕ್ಷಣಾ ಕಾಯಿದೆಯಲ್ಲಿ ಬಿಡುಗಡೆ ಮಾಡಬೇಕೆ ಅಥವಾ ಬೇಡವೆಂಬ ಬಗ್ಗೆ ಭಿನ್ನಾಭಿಪ್ರಾಯವಿದ್ದುದರಿಂದ ಇದನ್ನು ಮಾಡಲಾಗಿಲ್ಲ.

1964 ರಿಂದ 1969ರವರೆಗೆ ಅರಣ್ಯ ರಕ್ಷಣಾ ಕಾಯ್ದೆ ಜಾರಿಗೆ ಬರುವುದಕ್ಕೆ ಮುಂಚಿನಿಂದ ಅರಣ್ಯ ಇಲಾಖೆಯು ಕಂದಾಯ ಇಲಾಖೆಗೆ ಜಮೀನುಗಳನ್ನು ಬಿಡುಗಡೆ ಮಾಡಿದ್ದರಿಂದ ದಿನಾಂಕ 16.2.93ರಂದು ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಈ ಜಮೀನುಗಳು ಅರಣ್ಯ ಸಂರಕ್ಷಣಾ ಕಾಯ್ದೆಯ ವಿಧಿಗಳನ್ನು ಅನ್ವಯಿಸುವುದಿಲ್ಲ. ಆದುದರಿಂದ ಇವುಗಳ ಬಗ್ಗೆ ಭಾರತ ಸರ್ಕಾರದಿಂದ ಈ ಜಮೀನುಗಳ ಬಿಡುಗಡೆ ಕೋರುವ ಅವಶ್ಯಕತೆ ಇರುವುದಿಲ್ಲವೆಂದು ಒಂದು ತೀರ್ಮಾನ ತೆಗೆದುಕೊಳ್ಳಲಾಯಿತು. ಅರಣ್ಯ ಇಲಾಖೆಯು ಇದಕ್ಕೆ ಒಪ್ಪಿಗೆ ಸೂಚಿಸಿದೆ ಆದುದರಿಂದ ಈ ಜಮೀನುಗಳ ಬಗ್ಗೆ ಕಂದಾಯ ಇಲಾಖೆಯು 1970ಕ್ಕೆ ಮೊದಲು ಗುತ್ತಿಗೆಗೆ ಕೊಟ್ಟಿರುವ ಜಮೀನುಗಳ ಹಂಗಾಮಿ ಲಗಾಣಿಗಳನ್ನು ಸೇರಪಾಗಿ ಖಾಯಂ ಮಾಡಿಬಿಹುದಾಗಿದೆ.

ಈ ಬಗ್ಗೆ ದಿನಾಂಕ 3.3.93ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಹಂಗಾಮಿ ಲಗಾಣಿಗಳನ್ನು ಖಾಯಂ ಮಾಡಬೇಕೆಂದು ನಿರ್ಧಾರ ತೆಗೆದುಕೊಂಡಿದೆ. ಅದರಂತೆ ಸರ್ಕಾರವು ಕಾನೂನಿನ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಇದರ ಬಗ್ಗೆ ಮಾನ್ಯ ದೇಶಪಾಂಡೆಯವರು ನನ್ನ ಹತ್ತಿರ ಅನೇಕ ಸಲ ಬಂದಿದ್ದಾರೆ. ಒಂದು ಇದನ್ನು ಅದಷ್ಟು ಜಾಗ್ರತೆ ತೀರ್ಮಾನ ಕೈಗೊಳ್ಳಬೇಕು ಎಂದು ಒತ್ತಾಯ ಮಾಡಿದರು. ಅದ್ದರಿಂದ ಸರ್ಕಾರ ಈಗಾಗಲೇ ಇದನ್ನು ತೀರ್ಮಾನ ತೆಗೆದುಕೊಂಡಿದೆ. ಈ ಜಮೀನುಗಳನ್ನು ಅವರಿಗೆ ಖಾಯಂ ಮಾಡಿ ಕೊಡುತ್ತೇವೆ ಮತ್ತು ಫಾರೆಸ್ಟ್ ಇಲಾಖೆಯಿಂದ ಇದರ ಬಗ್ಗೆ ಯಾವುದೇ ಆಕ್ಷೇಪಣೆ ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ರಾಜ್ಯದ ಅರ್ಥ ಮಂತ್ರಿಗಳಾಗಿದ್ದಾಗ ಈ ಕಡು ಬಡವರಿಗೆ ಜಮೀನನ್ನು ಬಿಡುಗಡೆ ಮಾಡಿದ್ದರು. ಬಹಳ ಪರಿಶ್ರಮದಿಂದ ಈ ಸಮಸ್ಯೆ ಇತ್ತು. ನಮ್ಮ ಕಾಲದಲ್ಲಿ ಒಂದು ಹಂತಕ್ಕೆ ತಂದಿದ್ದೆವು. ನನಗೆ ಬಹಳ ಸಂತೋಷ ಆಗಿದೆ. ನಾನು ಸರ್ಕಾರಕ್ಕೆ ಮತ್ತು ಕಂದಾಯ ಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಏಕೆಂದರೆ ಇದು ಒಂದು ನಿರ್ಣಯ ತಂದಿದ್ದೀರಿ. ಇದು ನಮ್ಮ ಜಿಲ್ಲೆಯಲ್ಲಿ ಜ್ವಲಂತ ಸಮಸ್ಯೆ ಆಗಿತ್ತು. ಈ ಸಮಸ್ಯೆಯನ್ನು ಬಗೆಹರಿಸಿ ಎಷ್ಟೋ ಜನರ ಆಶೀರ್ವಾದಕ್ಕೆ ಸಹ ತಾವೂ ಪಾತ್ರರಾಗಿದ್ದೀರಿ. ಮಾನ್ಯ ಕಿರ್ಗಯಿಯವರು ಕಂದಾಯ ಸಚಿವರಾಗಿದ್ದಾಗ ಅವರ ಗಮನಕ್ಕೂ ಸಹ ನಾನು ತಂದಿದ್ದೆ. ಅವರೂ ಸಹ ಆ ಸಮಯದಲ್ಲಿ ಅದರ ಬಗ್ಗೆ ಪ್ರಾಕಷ್ಟು ಪ್ರಯತ್ನ ಮಾಡಿದ್ದರು. ಹಾಗಾಗಿ ಒಂದೇ ಒಂದು ವಿಷಯ ಕೇಳುತ್ತೇನೆ. ತಾವು ಡಿಮ್ಯಾಂಡ್ ಫುಲ್‌ಫಿಲ್ ಮಾಡಿದ್ದೀರಿ. ಎಷ್ಟು ದಿವಸದೊಳಗೆ ಸರ್ಕಾರದಿಂದ ಆಜ್ಞೆ ಹೊರಡಿಸುತ್ತೀರಿ ?

ಶ್ರೀ ಎ. ರಾಜಶೇಖರಮೂರ್ತಿ:– ಈಗ ತಾನೇ ತೀರ್ಮಾನ ತೆಗೆದುಕೊಂಡಿದ್ದೇವೆ. ಇಮ್ಮಡಿಯಾಟ್ ಆಗಿ ನಮ್ಮ ಜಿಲ್ಲಾಧಿಕಾರಿಗೆ ಇದನ್ನು ಕಳುಹಿಸಿ ಅವರಿಗೆ ಅದಷ್ಟು ಬೇಗ ಇದನ್ನು ಖಾಯಂ ಮಾಡಿಕೊಂಡು ಎಂದು ಆದೇಶ ಕೊಡುತ್ತೇನೆ.

5.45 ಪಿ. ಎಂ.

ನಿಯಮ 334ರ ಮೇರೆಗೆ

ಸಹಕಾರಿ ಕಾಯ್ದೆಯಡಿಯಲ್ಲಿ ಅಧ್ಯಕ್ಷರು ಹಾಗೂ ಇತರ ಪದಾಧಿಕಾರಿಗಳಿಗೆ ಪ್ರವಾಸ ಭತ್ಯೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಅಧ್ಯಕ್ಷರೇ, ಸಹಕಾರಿ ಕಾಯ್ದೆ (ರಾಜ್ಯ) ಕೆಳಗೆ ಕೆಲಸ ಮಾಡುತ್ತಿರುವ ಅಧ್ಯಕ್ಷರು ಹಾಗೂ ಇತರೆ ಪದಾಧಿಕಾರಿಗಳವರಿಗೆ, ಆಡಳಿತ ಮಂಡಳಿ